ಕರ್ನಾಟಕ ಸಹಕಾರಸಂಘಗಳ ನಿಯಮಾವಳಿ ಇವುಗಳ ಅಡಿಯಲ್ಲಿ ಸಂಘದ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪರಿಶೀಲಿಸುವುದು.

ಹಿರಿಯ ಕೆಲಸ ಪರಿವೀಕ್ಷಕರ ಪದನಾಮವನ್ನು ಜೂನಿಯರ್ ಇಂಜಿನಿಯರ್ ಎಂದು ಬದಲಾವಣೆ ಮಾಡುವುದು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷಣೆಯವರೇ ಮೂರು ವರ್ಷ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ, ಹಿರಿಯ ಕೆಲಸ ಪರಿವೀಕ್ಷಕರನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಬೇಕೆಂದು ಮತ್ತು ಜೇಷ್ಠತಾ ಪಟ್ಟಿಯಲ್ಲಿ ಸೇರಿಸಬೇಕೆಂದು ಸರ್ಕಾರದ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ. 484 ಎಸ್ ಪಿಎಸ್ 85 ಬೆಂಗಳೂರು ದಿನಾಂಕ 12-2-1988ರಲ್ಲಿ ಆದೇಶವಾಗಿರುರವರು, ಸರ್ಕಾರದ ಕಾರ್ಯದರ್ಶಿಯವರು, ಲೋಕೋಪಯೋಗಿ ಮತ್ತು ಕಾಡಾ ಇಲಾಖೆ ಬಹುಮಟ್ಟಿಗೆ ಕಟ್ಟಡ ಬೆಂಗಳೂರು ಇವರಿಗೆ ದಿನಾಂಕ 15.9.1989ರಂದ ಜನಆ: ಸಿ4:ಸಿಇವ: 107:88-89ರಲ್ಲಿ ಪತ್ರ ಬರೆದು ಈ ಕೆಳಕಂಡ ಹಿರಿಯ ಕೆಲಸ ನಿರೀಕ್ಷಕರುಗಳನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಿ, ಆ ಹುದ್ದೆಯಲ್ಲಿ ನಿಯುಕ್ತಿ ಗೊಳಿಸುವ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದ್ದರೂ ಸಹ, ಇದುವರೆಗೂ ತೀರ್ಮಾನ ಕೈಗೊಳ್ಳದೆ ಸದರಿ ಮೂರು ಜನ ಹಿರಿಯ ಕೆಲಸ ನಿರೀಕ್ಷಕರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರಿಪಡಿಸಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ ಎಂದು ತಿಳಿಯ ಬಯಸುತ್ತೇನೆ?

1. ಶ್ರೀ ಹೆಚ್. ಶಾಂತಮಲ್ಲಪ್ಪ, ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ, ಶಿವಮೊಗ್ಗ.

2. ಶ್ರೀ ಇ. ಶ್ರೀನಿವಾಸಮೂರ್ತಿ ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ -ಶಿವಮೊಗ್ಗ.

3. ಶ್ರೀ ಈರೇಗೌಡ ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ -ಹಾಸನ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಸಭಾಧ್ಯಕ್ಷಣೆಯವರೇ,

ಮುಖ್ಯ ಅಭಿಯಂತರರು, ಜನ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರು ತಮ್ಮ ದಿನಾಂಕ :15.4.91ರ ಪತ್ರ ಸಂಖ್ಯೆ : ಜಸಆ:ಸಿ-4:ಪಿವಾಇ: 107:88-89ರ ಪತ್ರದಲ್ಲಿ ಹಿರಿಯ ಕೆಲಸ ನಿರೀಕ್ಷಕರಾದ ಶ್ರೀ ಹೆಚ್. ಶಾಂತಮಲ್ಲಪ್ಪ, ಶ್ರೀ ಆರ್. ಶ್ರೀನಿವಾಸ ಮೂರ್ತಿ ಮತ್ತು ಶ್ರೀ ಈರೇಗೌಡರವರಿಗೆ ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 484 ಎಸ್‌ಪಿಎಸ್ 85 ದಿನಾಂಕ 12.2.88ರ ಪ್ರಕಾರ ಕಿರಿಯ ಇಂಜಿನಿಯರ್‌ಗಳ ವೇತನ ಶ್ರೇಣಿಗೆ ಸಮಾನಾಂತರ ವೇತನವನ್ನು ನೀಡಲಾಗುತ್ತಿದೆಯೆಂದೂ ಆದರೆಈ ಹಿರಿಯ ಕೆಲಸ ನಿರೀಕ್ಷಕರನ್ನು ಕಿರಿಯ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಿ ಆ ಹುದ್ದೆಯಲ್ಲಿ ನಿಯುಕ್ತಿಗೊಳಿಸುವ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಕೋರಿದ್ದರು.

ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ 484 ಎಸ್‌ಪಿಎಸ್ 85 ದಿನಾಂಕ 12.2.88ರ ಆದೇಶದಲ್ಲಿ ಪತ್ರಾಂಕಿತವಲ್ಲದ ಕೆಲಸ ನಿರೀಕ್ಷಕರ (ವರ್ಕ್‌ಇನ್ಸ್‌ಪೆಕ್ಟರ್)

ಹುದ್ದೆಗಳನ್ನು ಕಿರಿಯ ಅಭಿಯಂತರರ ಹುದ್ದೆಗೆ ಸಮಾನಾಂತರಗೊಳಿಸುವ ಬಗ್ಗೆ ಪರಿಶೀಲಿಸಿ 3 ವರ್ಷಗಳ ಡಿಪ್ಲೊಮೋ ಪಡೆದಿರುವ ಕೆಲಸ ನಿರೀಕ್ಷಕರನ್ನು ದಿನಾಂಕ 11.3.63ರ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 9 ಎಸ್ ಎಡಿ 61ರ ಸೌಲಭ್ಯವನ್ನು ಪಡೆಯಲು ಅರ್ಹರೆಂದು ಆದೇಶಿಸಿತ್ತು.

ಹಿರಿಯ ಕೆಲಸ ನಿರೀಕ್ಷಕರ ಹುದ್ದೆಗಳು ಸೂಪರ್ ನ್ಯೂಮರಿ ಹುದ್ದೆಗಳಾಗಿರುತ್ತವೆ. ಈ ಹುದ್ದೆಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈ ಕಾರಣದಿಂದಾಗಿಯೇ ಇವರಿಗೆ ಕಿರಿಯ ಅಭಿಯಂತರರ ಸಮಾನಾಂತರ ವೇತನವನ್ನು ಮಾತ್ರ ನೀಡಲಾಗಿತ್ತು. ಈ ರೀತಿಯ ಕೆಲವು ಕೆಲಸ ನಿರೀಕ್ಷಕರುಗಳಿಂದ ತಮ್ಮನ್ನು ಕಿರಿಯ ಅಭಿಯಂತರರ ವೃಂದಕ್ಕೆ ಸೇರಿಸಬೇಕೆಂದು ಮನವಿಗಳು ಬಂದಿವೆ.

ಕುಷ್ಠರೋಗ ವಿಭಾಗದ ಫಿಸಿಯೋಥೆರಫಿಸ್ಟ್‌ಗಳಿಗೆ ಮುಂಬಡ್ತಿ.

ಶ್ರೀ ವೆಂಕಟರಮಣ : ಮಾನ್ಯ ಅಧ್ಯಕ್ಷಣೆಯವರೇ, ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಕುಷ್ಠರೋಗ ವಿಭಾಗ ಆರಂಭಿಸಿ 35 ವರ್ಷಗಳಾದರೂ ಕೂಡ ಆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಫಿಸಿಯೋ-ಥೆರಾಪಿಸ್ಟ್ಸ್, ಅವರುಗಳಿಗೆ ಇನ್ನೂ ಪ್ರಮೋಷನ್ ಕೊಡಲಾಗದೆ, ಈ ವಿಷಯವನ್ನು ಕಳೆದ 10 ವರ್ಷಗಳವರೆಗೆ ಪರಿಶೀಲನೆಯಲ್ಲಿ ಇಟ್ಟುಕೊಂಡು ತೀರ್ಮಾನವಾಗದೆ ಏಕೆ ಇನ್ನೂ ಸರ್ಕಾರದ ಆರೋಗ್ಯ ಕಾರ್ಯದರ್ಶಿಯವರು ತಮ್ಮ ಕಛೇರಿಯಲ್ಲಿ ಫೈಲ್ ನಂ ಹೆಚ್‌ಎಫ್‌ಡಬ್ಲ್ಯೂ: 107 : ಸಿಜಿಇ: 91 ಇಟ್ಟುಕೊಂಡಿರುತ್ತಾರೆ.

ಅನೇಕ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸುಮಾರು 30 ಫಿಸಿಯೋ-ಥೆರಾಪಿಸ್ಟ್ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳನ್ನು ಏಕೆ ಇನ್ನೂ ಭರ್ತಿ ಮಾಡಲಿಲ್ಲ? ಅಥವಾ ಆ ಖಾಲಿ ಹುದ್ದೆಗಳನ್ನು ಅಬಾಲಿಷ್-ಇಲ್ಲದ ಹಾಗೆ ಮಾಡಬಾರದು? ಆದರ ಮೂಲಕ ಏಕೆ ಸರ್ಕಾರದ ಹಣವನ್ನು ಉಳಿಸಬಾರದು? ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಈ ಸಬೆಯಲ್ಲಿ ಉತ್ತರ ನೀಡಲು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು): ಮಾನ್ಯ ಸಭಾದ್ಯಕ್ಷಣೆಯವರೇ,

1. ಕುಷ್ಠ ರೋಗ ವಿಭಾಗದ ಕಾರ್ಯಕ್ರಮದಡಿಯಲ್ಲಿ 58 ಫಿಸಿಯೋತೆರಪಿಸ್ಟ್‌ಹುದ್ದೆಗಳು ಮಂಜೂರಾಗಿದ್ದು ಈ ಪೈಕಿ 28 ಜನ ಪಿರಿಯೋತೆರಪಿಸ್ಟ್‌ರು ಕೆಲಸ ಮಾಡುತ್ತಿದ್ದಾರೆ. ಇದರ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಮುಂದಿನ ಯಾವ ಭಡ್ತಿಗೂ ಅವಕಾಶವಿಲ್ಲ. ಆದರೆ 10 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಕಾಲಬದ್ಧ ಪ್ರಗತಿ ವೇತನ ಕೊಡಲಾಗಿದೆ. ಅಲ್ಲದೆ ಇತ್ತೀಚಿನ ಸರ್ಕಾರಿ ಆದೇಶದಂತೆ ಒಂದೇ ಹುದ್ದೆಯಲ್ಲಿ 15 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಸ್ವಯಂ ಚಾಲಿತ ವಿಶೇಷ ಪದೋನ್ನತಿಯನ್ನು ನೀಡಲಾಗಿದೆ. ಈ ನೌಕರರ ವಿಷಯವನ್ನು ಪರಿಶೀಲಿಸಲಾಗಿ ಮಿತವ್ಯಯ ಆದೇಶದ ಪ್ರಸ್ತಾವನೆಯನ್ನು ಒಮ್ಮೆ ಕೈಬಿಡಲಾಗಿತ್ತು. ಆದರೆ ಮತ್ತೆ ಸಂಘದ ಒತ್ತಾಯದಿಂದ ವಿಷಯವನ್ನು ಪುನಃ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಮತ್ತು ಕಡತವು ಆರ್ಥಿಕ ಇಲಾಖೆಯ ಸಹಮತಿಗೆ ಹೋಗುವ ಹಂತದಲ್ಲಿದೆ.
2. 30 ಫಿಸಿಯೋತೆರಪಿಸ್ಟ್ ಹುದ್ದೆಗಳು ಖಾಲಿ ಇವೆ. ಮೇಲೆ ತಿಳಿಸಿದಂತೆ ಆರ್ಥಿಕ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಿಲ್ಲ. ಈಗ ಆರ್ಥಿಕ ಇಲಾಖೆಯು ಕೆಲವು ಶರತ್ತುಗೊಳಗೊಂಡು ಈ ಹುದ್ದೆಗಳನ್ನು